# ನಿರೀಕ್ಷಿತ ಸವಾಲುಗಳು ಮತ್ತು ಕೆಲವು ಪರಿಹಾರಗಳು

ವಿಪಿನ್ ಕುಮಾರ್

***

ಕೆಲ ದಿನಗಳ ಹಿಂದೆ ಲಸಿಕೆಗೆ ಸಂಬಂಧಿಸಿದ ಕೆಲಸಕ್ಕಾಗಿ *ಬಸ್ಸಿ ಅಡ್ಡಾ ಪಂಚಾಯತ್* (ಬನಸ್ವಾರಾ, ರಾಜಸ್ಥಾನ)ಗೆ ಹೋಗಬೇಕಾಗಿ ಬಂದಿತ್ತು. ಅಲ್ಲೊಂದು ಚಹಾ ಅಂಗಡಿಯಲ್ಲಿ ಪುಟ್ಟ ಹುಡುಗಿ ಕೆಲಸ ಮಾಡುತ್ತಿರುವುದನ್ನು ಕಂಡೆ. ಆಕೆಗೆ 9-10 ವರ್ಷ ವಯಸ್ಸಿರಬಹುದು. ನಾನು ಕೇಳಿದಾಗ ಆಕೆ ಹೇಳಿದ ಹೆಸರು; ಖುತು. ಶಾಲೆಗೆ ಹೋಗುತ್ತಿಲ್ಲವೇ ಎಂದು ಆಕೆಯನ್ನು ಕೇಳಿದೆ; ಮೊದಲು ಹೋಗುತ್ತಿದ್ದೆ, ಈಗ ಬಿಟ್ಟುಬಿಟ್ಟಿದ್ದೇನೆ ಎಂದು ತನ್ನದೇ ಸ್ಥಳೀಯ ಭಾಷೆಯಲ್ಲಿ ತಿಳಿಸಿದಳು. ಶಾಲೆ ಬಿಡುವಾಗ ಎಷ್ಟನೇ ತರಗತಿಯಲ್ಲಿದ್ದೆ ಎಂದು ಕೇಳಿದರೂ ಆಕೆಗದು ಗೊತ್ತಿರಲಿಲ್ಲ. ತನ್ನ ಶಾಲಾ ದಿನಗಳನ್ನು ನೆನಪಿಸಿಕೊಳ್ಳಲು ಆಕೆ ಪ್ರಯತ್ನಿಸಿದಳಾದರೂ ಯಾವ ತರಗತಿಯಲ್ಲಿ ಕಲಿಯುತ್ತಿದ್ದೆ ಎಂದು ಹೇಳಲು ಅವಳಿಗೆ ಸಾಧ್ಯವಾಗಲಿಲ್ಲ. ಇದು ಅನೇಕ ಕಡೆ ಕಾಣುವ ಸಾಮಾನ್ಯ ದೃಶ್ಯ. ಬಹುತೇಕ ಮಕ್ಕಳು ಈಗ ಸ್ವಚ್ಛಂದವಾಗಿ, ದಿನನಿತ್ಯದ ಕೆಲಸ ಮಾಡಿಕೊಂಡು ಕಾಲ ಕಳೆಯುತ್ತಿದ್ದಾರೆ. ಕಾರಣಗಳು ಸಾವಿರವಿರಬಹುದು, ಇಂತಹ ಪುಟ್ಟ ಪುಟ್ಟ ಮಕ್ಕಳು ಶಾಲೆಗಳಿಂದ ದೂರ ಉಳಿದಿರುವುದಂತೂ ಸತ್ಯ. ಇದರಿಂದ ನಮಗೆ ವೇದ್ಯವಾಗುವ ಸಂಗತಿ ಏನೆಂದರೆ ಮಕ್ಕಳ ಶಿಕ್ಷಣದ ಬಗೆಗಿನ ಶಿಕ್ಷಕರ ಆತಂಕವೇನಿದೆ ಅದು ನಿರಾಧಾರವೇನೂ ಅಲ್ಲ. ಸಂಕಲನ, ವ್ಯವಕಲನ ಮತ್ತು ಗುಣಾಕಾರದ ಬಗ್ಗೆ ತಿಳಿದಿದೆಯೇ ಎಂದು ಖುತುವನ್ನು ನಾನು ಕೇಳಿದೆ. ಆಕೆಗೆ ಸರಿಯಾಗಿ ಲೆಕ್ಕ ಹಾಕುವುದಕ್ಕೂ ಬರುತ್ತಿರಲಿಲ್ಲ. ಅವಳ ವಯಸ್ಸಿಗೆ ಆಕೆ ಈ ಹೊತ್ತಿಗೆ ನಾಲ್ಕು ಅಥವಾ ಐದನೇ ತರಗತಿಯಲ್ಲಿ ಇರಬೇಕಿತ್ತು.

**ಪ್ರಮುಖ ಸವಾಲುಗಳು**

ಈ ಸಾಂಕ್ರಾಮಿಕ ರೋಗದ (ಪ್ಯಾಂಡಮಿಕ್) ಸಂದರ್ಭದಲ್ಲಿ ದಕ್ಷಿಣ ರಾಜಸ್ಥಾನ ಜಿಲ್ಲೆಯ ಬನಸ್ವಾರ ಜಿಲ್ಲೆಯಲ್ಲಿ ಅನೇಕ ಮಂದಿ ಶಿಕ್ಷಕರು ಮತ್ತು ಮಕ್ಕಳನ್ನು ನಿರಂತರವಾಗಿ ಭೇಟಿ ಮಾಡುವ ಅವಕಾಶ ದೊರೆಯಿತು. ಈ ಜಿಲ್ಲೆಯಲ್ಲಿ ಅರಾವಳಿ ಬೆಟ್ಟ ಶ್ರೇಣಿಗಳು ಕೊನೆಗೊಳ್ಳುತ್ತವೆ. ಹಾಗಾಗಿ ಇಲ್ಲಿ ಕಿರು ಬೆಟ್ಟ ಪ್ರದೇಶಗಳು ಮತ್ತು ದ್ವೀಪದಂತಹ ಪ್ರದೇಶಗಳನ್ನು ಕೂಡ ಕಾಣಬಹುದು. ಈ ಜಿಲ್ಲೆಯ ಶೇ.85ರಷ್ಟು ಜನಸಂಖ್ಯೆ ಬುಡಕಟ್ಟು ಜನರು. ಇಲ್ಲಿನ ಭೌಗೋಳಿಕತೆ ಮತ್ತು ಸಂಪನ್ಮೂಲಗಳ ಆಧಾರದಲ್ಲಿ ಮಕ್ಕಳ ಶಿಕ್ಷಣಕ್ಕೆ ಸಂಬಂಧಿಸಿದಂತೆ ನಾಲ್ಕು ಬಹುಮುಖ್ಯ ಸವಾಲುಗಳು ಕಾಣಿಸಿಕೊಳ್ಳುತ್ತವೆ.

***ಆನ್-ಲೈನ್ ಕಲಿಕೆಗೆ ಸಂಪನ್ಮೂಲದ ಕೊರತೆ***

ಜಿಲ್ಲೆಯ ಬಹುತೇಕ ಜನರು ಗ್ರಾಮಗಳಲ್ಲಿ ವಾಸ ಮಾಡುತ್ತಾರೆ. ಆನ್-ಲೈನ್ ಕಲಿಕೆಗಾಗಿ ಅವರಲ್ಲಿ ಬೇಕಾದ ಸಂಪನ್ಮೂಲಗಳಿಲ್ಲ. ಶೇ.80ರಷ್ಟು ಪಾಲಕರಲ್ಲಿ ಆಂಡ್ರಾಯ್ಡ್ ಫೋನ್ ಗಳೇ ಇಲ್ಲ. ಹಾಗೆ

ಫೋನ್ ಇರುವವರು ಇಂಟರ್ನೆಟ್ ಸೌಲಭ್ಯವನ್ನು ಹೊಂದಿಲ್ಲ. ತೀರಾ ಅಗತ್ಯವಿದ್ದವರು ಮಾತ್ರ ಇಂಟರ್ನೆಟ್ ಸೌಲಭ್ಯವನ್ನು ಪಡೆದಿರುತ್ತಾರೆ. ಪರಿಸ್ಥಿತಿ ಹೀಗಿರುವಾಗ ಆನ್-ಲೈನ್ ಮಾಧ್ಯಮದ ಮೂಲಕ ಮಕ್ಕಳನ್ನು ಸಂಪರ್ಕಿಸುವ ಬಗ್ಗೆ ಯೋಚನೆಯನ್ನೇ ಮಾಡಲು ಸಾಧ್ಯವಿಲ್ಲ. ಸರ್ಕಾರ ಕೆಲವು ಶೈಕ್ಷಣಿಕ ಕಾರ್ಯಕ್ರಮಗಳನ್ನು ಟಿವಿ ಮತ್ತು ರೇಡಿಯೋ ಮೂಲಕ ಪ್ರಸಾರ ಮಾಡಿತು ಕೂಡ. ಆದರೆ ಇಲ್ಲಿನ ಗ್ರಾಮಗಳಲ್ಲಿ ಆ ಎರಡೂ ಮಾಧ್ಯಮಗಳನ್ನು ತೀರಾ ಕಡಿಮೆ ಜನ ಬಳಕೆ ಮಾಡುತ್ತಾರೆ. ಎಲ್ಲಕ್ಕಿಂತ ಮುಖ್ಯವಾಗಿ ಆನ್-ಲೈನ್ ನಲ್ಲಿ ಶಿಕ್ಷಕರನ್ನು ಸುಮ್ಮನೆ ನೋಡಿಕೊಂಡು ಅಥವಾ ಕೇಳಿಕೊಂಡು ಕಲಿಯುವುದಂತೂ ಇನ್ನೊಂದು ಸವಾಲು. ಇಂತಹ ಸ್ಥಿತಿಯಲ್ಲಿ ಶಿಕ್ಷಕರು ಪ್ರಯತ್ನ ಮಾಡುತ್ತಿಲ್ಲ ಎನ್ನುವುದು ತಪ್ಪಾಗುತ್ತದೆ. ಈ ಜಿಲ್ಲೆಯಲ್ಲಿ ಶಾಲೆಗೆ ಬರುತ್ತಿರುವ ಬಹುತೇಕ ಮಕ್ಕಳು ಶಾಲೆಗೆ ಹೋಗುತ್ತಿರುವ ಮೊದಲ ತಲೆಮಾರಿನ ಮಕ್ಕಳು ಎಂದರೆ ಅಚ್ಚರಿಪಡುತ್ತೀರಿ. ಇಂತಹ ಸ್ಥಿತಿಯಲ್ಲಿ ಆನ್-ಲೈನ್ ನಲ್ಲಿ ಕೆಲವು ಕಲಿಕಾ ಸಾಮಗ್ರಿಗಳನ್ನು ಹಂಚಿಕೊಂಡರೂ ಕೂಡ ಅದನ್ನು ಅರ್ಥ ಮಾಡಿಕೊಳ್ಳುವಂತೆ ಸಹಾಯ ಮಾಡುವವರು ಕೂಡ ಕುಟುಂಬದಲ್ಲಿ ಯಾರೂ ಇಲ್ಲ. ಒಟ್ಟಾರೆಯಾಗಿ, ಪ್ರಾಥಮಿಕ ಹಂತದಲ್ಲಿ ಸರ್ಕಾರಿ ಕಾರ್ಯಕ್ರಮಗಳ ಅಡಿಯಲ್ಲಿ ಯಾವುದೇ ಆನ್-ಲೈನ್ ಬೋಧನೆ-ಕಲಿಕಾ ಪ್ರಕ್ರಿಯೆಯನ್ನು ಕೈಗೊಂಡರೂ ಅದು ಯಶಸ್ಸನ್ನು ಕಾಣುವುದು ಸಾಧ್ಯವಿಲ್ಲದ ಮಾತು.

***ಚದುರಿಕೊಂಡಿರುವ ಮನೆಗಳು***

ಇಲ್ಲಿನ ಗ್ರಾಮಗಳಲ್ಲಿ ಕೇರಿಗಳಾಗಲಿ, ನೆರೆಹೊರೆಯವರಾಗಲಿ ಇಲ್ಲ. ಪ್ರತಿಯೊಂದು ಮನೆಗಳ ನಡುವಿನ ಅಂತರ ಬಹಳ ದೂರ ದೂರ. ಎರಡು ಮನೆಗಳ ನಡುವಿನ ಅಂತರ 50 ಮೀಟರ್ ಇರಬಹುದು. ಅಲ್ಲಿಂದ ಮುಂದಿನ ಮನೆ 500 ಮೀಟರ್ ಅಥವಾ ಒಂದು ಕಿ.ಮೀ. ದೂರದಲ್ಲಿರುತ್ತದೆ. ಹಾಗಾಗಿ ಮಕ್ಕಳನ್ನೆಲ್ಲ ಒಂದು ಕಡೆ ಸೇರಿಸಿ ಬೋಧಿಸುವುದು ಸವಾಲಿನ ಕೆಲಸ. ಹಾಗಾಗಿ ಹೆಚ್ಚಿನ ಶಾಲೆಗಳಲ್ಲಿನ ಬಹುತೇಕ ಮಕ್ಕಳು ಅತ್ಯಲ್ಪ ಸಮಯ ಮಾತ್ರ ಶಿಕ್ಷಕರೊಂದಿಗೆ ಮಾತನಾಡಲು ಸಾಧ್ಯವಾಗುತ್ತದೆ. ತೀರಾ ಕಷ್ಟಪಟ್ಟರೆ ಒಂದು ಗುಂಪಿನ ಮಕ್ಕಳಿಗೆ ಒಂದು ಬಾರಿ ಒಂದರಿಂದ ಎರಡು ಗಂಟೆ ಕಾಲ ಪಾಠ ಮಾಡಲು ಶಿಕ್ಷಕರಿಗೆ ಸಾಧ್ಯವಾಗಬಹುದು. ಮರುದಿನ ಶಿಕ್ಷಕರು ಇನ್ನೊಂದು ಸ್ಥಳಕ್ಕೆ ಹೋಗಿ ಇನ್ನೊಂದು ಗುಂಪಿನ ಮಕ್ಕಳಿಗೆ ಪಾಠಮಾಡಬೇಕಾಗುತ್ತದೆ. ಇದರ ಜೊತೆಗೆ ಮಕ್ಕಳೊಂದಿಗೆ ಸಂವಹನ ನಡೆಸಲು ಮತ್ತು ಈ ಮಾತುಕತೆಗೆ ಸಿಗುವ ಸಮಯ ಕೂಡ ಅತ್ಯಲ್ಪ.

***ಹಾಲಿಯಿರುವ ಮತ್ತು ವರ್ಗ ಮಟ್ಟದ ಕಲಿಕೆಯ ಅಂತರ***

ತರಗತಿ ಮಟ್ಟದಲ್ಲಿಯೂ ಕೂಡ ಮಕ್ಕಳು ಗುಣಾಕಾರ, ಭಾಗಾಕಾರ, ಭಿನ್ನಾಂಶಗಳು ಮತ್ತು ದಶಮಾಂಶಗಳನ್ನು ಕಲಿಯುತ್ತಿದ್ದಿರಬಹುದು. ಶಿಕ್ಷಕರು ಅವರಿಗೆ ಎಣಿಕೆ ಮತ್ತು ಸಂಕಲನ ಹಾಗೂ ವ್ಯವಕಲನದ ಬಗ್ಗೆ ಪಾಠ ಮಾಡಬೇಕು. ಇದು ಶಿಕ್ಷಕರ ಪಾಲಿನ ಬಹಳ ದೊಡ್ಡ ಕಳವಳದ ಸಂಗತಿ. ಎನ್‌ಎಎಸ್[1] (NAS) ಮತ್ತು ಎಎಸ್‌ಇಆರ್[2] (ASER) ವರದಿಗಳನ್ನು ನಾವು ನೋಡಿದರೆ, ಶೇ.50ಕ್ಕೂ ಹೆಚ್ಚಿನ ಶಾಲೆಯ ಮಕ್ಕಳು ಶಾಲೆ ನಿಯಮಿತವಾಗಿ ನಡೆಯುತ್ತಿದ್ದರೂ ಕೂಡ ಗಣಿತ ಮತ್ತು ಭಾಷಾ ವಿಷಯದಲ್ಲಿ ವರ್ಗ-ಮಟ್ಟದ ಕಲಿಕಾ ಫಲಿತಾಂಶಗಳನ್ನು ಪಡೆಯಲು ಸಾಧ್ಯವಿಲ್ಲದಿರುವುದನ್ನು

ಕಾಣಬಹುದಾಗಿದೆ. ಇಂತಹ ಸ್ಥಿತಿಯಲ್ಲಿ 18 ತಿಂಗಳ ಕಾಲ ಶಾಲೆಗೆ ಹೋಗದೇ ಇರುವ ಅಂತರವಿದೆಯಲ್ಲ, ಅದು ಪ್ರಾಥಮಿಕ ಶಿಕ್ಷಣವನ್ನು ಬಹಳ ದೊಡ್ಡ ಅಂಧಕಾರದಲ್ಲಿ ಮುಳುಗಿಸಿದೆ.

ಹಿಂದೆಲ್ಲ ವಿಜ್ಞಾನ ಶಿಕ್ಷಕರು ವಿಜ್ಞಾನ ವಿಷಯಗಳನ್ನು ಪ್ರಯೋಗಗಳು ಮತ್ತು ಚಟುವಟಿಕೆಗಳ ಮೂಲಕ ಬೋಧನೆ ಮಾಡುತ್ತಿದ್ದರು. ಅದು ಮಕ್ಕಳ ಮನಸ್ಸಿನಲ್ಲಿ ಅಚ್ಚೊತ್ತುತ್ತಿತ್ತು. ಈಗ ಅದು ಯಾವ ಕಾರಣಕ್ಕೂ ಸಾಧ್ಯವಿಲ್ಲದಂತಾಗಿದೆ. ಇದು ವಿಜ್ಞಾನ ಶಿಕ್ಷಕರ ಪಾಲಿನ ದೊಡ್ಡ ಚಿಂತೆಯಾಗಿದೆ. ಹೊಸ ವೈಜ್ಞಾನಿಕ ಪದಗಳನ್ನು ಕಾಲ್ಪನಿಕವಾಗಿ ಅರ್ಥಮಾಡಿಕೊಳ್ಳಲು ಮಕ್ಕಳ ಜೊತೆಗೆ ನಿರಂತರ ಮಾತುಕತೆಯ ಅಗತ್ಯವಿರುತ್ತದೆ. ಇದನ್ನು *ಮೊಹಲ್ಲಾ* ಕ್ಲಾಸ್ ಗಳಂತಹ ಮಾಧ್ಯಮಗಳಿಂದ ನಿಯಮಿತವಾಗಿ ಮಾಡುವುದು ಕಷ್ಟದ ಕೆಲಸ. ಹಿರಿಯ ಪ್ರಾಥಮಿಕ ಹಂತದಲ್ಲಿ ವಿಜ್ಞಾನ ಮತ್ತು ಗಣಿತವನ್ನು ಕಲಿಸುವ ಶಿಕ್ಷಕರ ಇನ್ನೊಂದು ಚಿಂತೆ ಏನೆಂದರೆ ಈ ಹಂತದಲ್ಲಿ ಹಿಂದಿನ ತರಗತಿಯಲ್ಲಿ ಕಲಿತ ಪರಿಕಲ್ಪನೆಗಳು ಅತ್ಯಂತ ಮಹತ್ವ ಹಾಗೂ ಅವುಗಳನ್ನು ಕಲಿಯಲು ಸಾಕಷ್ಟು ಸಮಯವೂ ಬೇಕಾಗುತ್ತದೆ. ಸದ್ಯದ ಪರಿಸ್ಥಿತಿಯಲ್ಲಿ ಮಕ್ಕಳನ್ನು ಎರಡು ತರಗತಿ ಮುಂದಕ್ಕೆ  ತೇರ್ಗಡೆ ಮಾಡಿರುವ ಸಂದರ್ಭದಲ್ಲಿ ಅವರನ್ನು ಸಾಮಾನ್ಯ ಮಟ್ಟಕ್ಕೆ ತರುವುದೇ ದೊಡ್ಡ ಸವಾಲು. ಪ್ರಾಥಮಿಕ ಹಂತಕ್ಕೆ ಹೋಲಿಸಿದರೆ ಈ ಹಂತದಲ್ಲಿ ಪಠ್ಯ ವಿಷಯಗಳೂ ಗಣನೀಯವಾಗಿ ಕಾಣುವುದರಿಂದ ಮಕ್ಕಳ ಓದುವ ಮತ್ತು ಬರೆಯುವ ಕೌಶಲ ಕೂಡ ನಿರ್ಣಾಯಕ ಎಂದು ಕೆಲವು ಅನುಭವಿ ಶಿಕ್ಷಕರು ತಮ್ಮ ಅಭಿಪ್ರಾಯವನ್ನು ಹಂಚಿಕೊಂಡಿದ್ದಾರೆ. ಇದರ ಜೊತೆಗೆ ಸರಿಯಾಗಿ ಓದಲು ಮತ್ತು ಬರೆಯಲು ಬಾರದ ಮಕ್ಕಳು ತಮ್ಮ ಹೋಮ್-ವರ್ಕ್ ಪೂರ್ತಿಗೊಳಿಸಲು ಸಾಧ್ಯವಾಗುವುದಿಲ್ಲ; ಇದು ಇನ್ನಷ್ಟು ಹಿನ್ನಡೆಯನ್ನು ಅನುಭವಿಸುವಂತೆ ಮಾಡುತ್ತದೆ. ಪರಿಸ್ಥಿತಿ ಹೀಗೆಲ್ಲ ಇದ್ದರೂ ಕೂಡ ಶಿಕ್ಷಕರು ಮಕ್ಕಳೊಂದಿಗೆ ಕೆಲಸ ಮಾಡಲು ನಿರಂತರ ಪ್ರಯತ್ನ ಮಾಡುತ್ತಿದ್ದಾರೆ.

***ಶಾಲಾ ದಿನಚರಿಗೆ ಮರಳುವುದು***

ಶಾಲೆಗಳು ಪುನರಾರಂಭವಾಗಿ ಮಕ್ಕಳು ಶಾಲೆಗೆ ಬಂದರೆ ಶಿಕ್ಷಕರ ಪಾಲಿಗೆ ಇನ್ನೊಂದು ಚಿಂತೆ ಶುರುವಾಗುತ್ತದೆ. ಸರಿಸುಮಾರು ಎರಡು ವರ್ಷಗಳ ಶಾಲಾ ಮುಕ್ತ ದಿನಗಳ ಬಳಿಕ ಅವರು ಮರಳಿ ಶಾಲೆಗೆ ಬಂದರೆ ಅವರನ್ನು ದಿನವಿಡೀ ಬೋಧನೆ-ಕಲಿಕೆ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದು ಸವಾಲಿನ ಕೆಲಸವಾಗುತ್ತದೆ. ಈಗ ಅವರು ಮೊಹಲ್ಲಾ ತರಗತಿಯಲ್ಲಿ ಒಂದರಿಂದ ಎರಡು ಗಂಟೆಗಳ ಕಾಲ ಮಾತ್ರ ಕುಳಿತುಕೊಳ್ಳುತ್ತಾರೆ. ಹೆಚ್ಚಿನ ಸಮಯ ತರಗತಿಯಲ್ಲಿ ಕಳೆದರೆ ಅವರ ಹಸಿವನ್ನು ನೀಗಿಸಲು *ಮೊಹಲ್ಲಾ* ತರಗತಿಗಳಲ್ಲಿ ಮಧ್ಯಾಹ್ನ ಬಿಸಿಯೂಟದ ವ್ಯವಸ್ಥೆ ಇಲ್ಲ.

**ಶಿಕ್ಷಕರಿಗೆ ಕೆಲವು ಸಲಹೆಗಳು**

ಮೊದಲನೆಯದಾಗಿ ಪಾಲಕರೊಂದಿಗೆ ಮಾತುಕತೆ ನಡೆಸಿ ಮಕ್ಕಳು ನಿಯಮಿತವಾಗಿ ಶಾಲೆಗೆ ಬರುವಂತೆ ಮಾಡುವುದು. ಎರಡನೆಯದಾಗಿ, ಶಾಲೆಯಲ್ಲಿ ಲವಲವಿಕೆಯ ಮತ್ತು ಖುಷಿಯ ವಾತಾವರಣವನ್ನು ನಿರ್ಮಾಣ ಮಾಡುವುದು; ಇದರಿಂದ ಅವರು ಕುತೂಹಲದಿಂದ ನಿಯಮಿತವಾಗಿ ಶಾಲೆಗೆ ಬರಲು ಅನುಕೂಲವಾಗುತ್ತದೆ. ಮಕ್ಕಳು ಕಲಿಕೆಗೆ ಸಿದ್ಧಗೊಳ್ಳುವಂತೆ ಮಾಡಲು ಶಾಲೆ ಮತ್ತು ಶಿಕ್ಷಕರ ನಡುವಿನ ಭಾವನಾತ್ಮಕ ಬಂಧವನ್ನು ಗಟ್ಟಿಗೊಳಿಸುವುದು ಮುಖ್ಯವಾಗುತ್ತದೆ. ಮಕ್ಕಳ

ಕಲಿಕಾ ಹಂತಕ್ಕೆ ತಕ್ಕಂತೆ ಮೌಲ್ಯಮಾಪನ ಮಾಡುವುದು ಅತ್ಯಂತ ಮಹತ್ವ ಮತ್ತು ಪರಸ್ಪರ ಸಂವಹನದ ಮೂಲಕ ಈ ಮೌಲ್ಯಮಾಪನವನ್ನು ಇನ್ನಷ್ಟು ಉತ್ತಮವಾಗಿ ಮಾಡಲು ಸಾಧ್ಯವಾಗುತ್ತದೆ. ಪೇಪರ್-ಪೆನ್ಸಿಲ್ ಪರೀಕ್ಷೆಗಳಿಂದ ಮಾತ್ರ ಇದು ಸಾಧ್ಯವಾಗುವುದಿಲ್ಲ. ಬಹುಶಹ ಸಾಕಷ್ಟು ಮಕ್ಕಳಿಗೆ ಇದು ಸವಾಲು ಕೂಡ. ಇದು ಅವರು ಶಾಲೆಗೆ ಬರುವ ಉತ್ಸಾಹವನ್ನೇ ಕುಂದಿಸಬಲ್ಲದು.

ಆರಂಭದಲ್ಲಿ ಈಗಿರುವ ಹಂತಕ್ಕೆ ತಕ್ಕಂತೆ  ಮಕ್ಕಳ ಗುಂಪುಗಳನ್ನು ಮಾಡಿ ಪ್ರಸ್ತುತ ಇರುವ ತರಗತಿಯ ಹಂತಕ್ಕೇ ಅವರನ್ನು ತರುವ ಪ್ರಯತ್ನವನ್ನು ಮಾಡಬೇಕು. ಮಕ್ಕಳ ಕಲಿಕಾ ಮಟ್ಟಗಳಲ್ಲಿ ಬದಲಾವಣೆಯಾಗುತ್ತಿದ್ದಂತೆ ಅವರ ಗುಂಪುಗಳು ಕೂಡ ಬದಲಾಗಬೇಕು. ಈಗ ನಮ್ಮ ಮುಂದಿರುವ ಕೆಲಸ ಭಾಷಾ ವಿಷಯ, ಗಣಿತಶಾಸ್ತ್ರದ ಮೂಲಭೂತ ಕೌಶಲಗಳು ಹಾಗೂ ಪ್ರಾಥಮಿಕ ಹಂತದಲ್ಲಿ ಪರಿಸರಾತ್ಮಕ ಅಧ್ಯಯನಗಳು ಮತ್ತು ಹಿರಿಯ ಪ್ರಾಥಮಿಕ ಹಂತದಲ್ಲಿ ವಿಷಯ ನಿರ್ದಿಷ್ಟವಾದ ಮೂಲಭೂತ ಪರಿಕಲ್ಪನೆಗಳು ಹಾಗೂ ಕೌಶಲಗಳ ಕಡೆಗೆ ಹೆಚ್ಚಿನ ಗಮನವನ್ನು ಹರಿಸುವುದು. ಕನಿಷ್ಠ ಎರಡು ತಿಂಗಳಾದರೂ ಇವುಗಳ ಮೇಲೆ ನಾವು ಗಮನವನ್ನು ಹರಿಸಬೇಕು. ಇದನ್ನು ಇನ್ನಷ್ಟು ವಿಸ್ತರಿಸಬೇಕೇ ಎನ್ನುವುದನ್ನು ನಿರಂತರ ಪರಾಮರ್ಶೆಯಿಂದ ಮಾತ್ರ ತಿಳಿದುಕೊಳ್ಳಬಹುದು. ಇದಾದ ಬಳಿಕ ಮಕ್ಕಳ ತರಗತಿಗೆ ತಕ್ಕಂತೆ ಅವರ ಅಗತ್ಯಗಳನ್ನು ಗುರುತಿಸುವ ಕಡೆಗೆ ನಾವು ಮುನ್ನಡೆಯಬಹುದು.

ಪರಿಹಾರ ಕ್ರಮಗಳ ಬೆಂಬಲದ ಅಗತ್ಯವಿರುವ ಹಿರಿಯ ಪ್ರಾಥಮಿಕ ಹಂತಕ್ಕೆ ತೇರ್ಗಡೆಯನ್ನು ಪಡೆದ ಮಕ್ಕಳಿಗೆ 2-3 ಕ್ಲಾಸ್ ಗಳ ಗುಂಪುಗಳನ್ನು ಮಾಡುವುದು, ಅಂದರೆ ಬಹು-ವರ್ಗ, ಬಹು-ಹಂತದ ಕಲಿಕಾ ವಿಧಾನದಿಂದ ಸಹಾಯವಾಗಬಹುದು. ಶಾಲೆಯ ಗೋಡೆಗಳನ್ನು ಬೋಧನೆ-ಕಲಿಕೆ ಸಾಮಗ್ರಿ (ಟಿಎಲ್‌ಎಂ) ಗಳಿಂದ ಅಲಂಕರಿಸಬಹುದು. ಇದು ಮಕ್ಕಳು ಕಲಿಕೆಗೆ ಹೆಚ್ಚು ಹೆಚ್ಚು ತೆರೆದುಕೊಳ್ಳಲು ಮತ್ತು ಕಲಿಕೆಯ ವೇಗವನ್ನು ಹೆಚ್ಚಿಸಿಕೊಳ್ಳಲು ಸಹಾಯವಾಗುತ್ತದೆ.

ಈ ಸಂಭಾವ್ಯ ಪರಿಹಾರಗಳಿಗೆ ವಿಷಯಾವಾರು, ವ್ಯವಸ್ಥಿತವಾದ ಪೂರಕ ಅಂಶಗಳನ್ನು ಒದಗಿಸಲು ಮತ್ತಷ್ಟು ಪ್ರಯತ್ನಗಳನ್ನು ಮಾಡುವುದು ಮುಖ್ಯ. ಇದಕ್ಕೆ ನಾವು ಶಾಲೆ ಪುನರಾರಂಭವಾಗುವುದಕ್ಕೆ ಮುನ್ನವೇ ಸಿದ್ಧತೆಗಳನ್ನು ಮಾಡಿಕೊಂಡರೆ ಮುಂದಿನ ಸುದೀರ್ಘ ದಾರಿಯನ್ನು ಸುಲಭವಾಗಿ ಕ್ರಮಿಸಲು ಸಾಧ್ಯವಾಗುತ್ತದೆ. ಇಲ್ಲಿ ಅತ್ಯಂತ ಮಹತ್ವದ ಸಂಗತಿ ಏನೆಂದರೆ ಶಿಕ್ಷಕರು ಈ ವಿಷಯದಲ್ಲಿ ಹೆಚ್ಚು ಕಾಳಜಿಯನ್ನು ಹೊಂದಿದ್ದಾರೆ. ಅವರ ಪ್ರಯತ್ನಗಳು ಸಾಂಕ್ರಾಮಿಕ (ಪ್ಯಾಂಡಮಿಕ್) ಬಳಿಕದ ಶಿಕ್ಷಣದ ಚಿತ್ರವನ್ನು ನಿಶ್ಚಿತವಾಗಿ ಬದಲಿಸಲಿವೆ ಎನ್ನುವುದರಲ್ಲಿ ಅನುಮಾನವಿಲ್ಲ.

***

* ಮಕ್ಕಳ ಗುರುತನ್ನು ಗೋಪ್ಯವಾಗಿಡುವ ಸಲುವಾಗಿ ಅವರ ಹೆಸರುಗಳನ್ನು ಬದಲಿಸಲಾಗಿದೆ.

**ಅಡಿಟಿಪ್ಪಣಿಗಳು**

[1] ರಾಷ್ಟ್ರೀಯ ಸಾಧನಾ ಸಮೀಕ್ಷೆ (ನ್ಯಾಷನಲ್ ಅಚೀವ್ಮೆಂಟ್ ಸರ್ವೆ)

[2] ಶೈಕ್ಷಣಿಕ ವರದಿಯ ವಾರ್ಷಿಕ ಸ್ಥಿತಿಗತಿ (ಆ್ಯನ್ಯುಲ್ ಸ್ಟೇಟಸ್ ಆಫ್ ಎಜುಕೇಶನಲ್ ರಿಪೋರ್ಟ್-ಎಎಸ್ಇಆರ್)

***

**ಬಿಪಿನ್ ಕುಮಾರ್** ಅವರು ಮುಝಫರ್ ನಗರದ ಸನಾತನ್ ಧರಮ್ ಕಾಲೇಜ್ (ಮೀರತ್ ನ ಚೌಧರಿ ಚರಣ್ ಸಿಂಗ್ ವಿಶ್ವವಿದ್ಯಾಲಯದ ಅಂಗಸಂಸ್ಥೆ)ನಿಂದ ರಸಾಯನಶಾಸ್ತ್ರದಲ್ಲಿ ಎಂಎಸ್ಸಿ ಪದವಿಯನ್ನು ಪಡೆದಿದ್ದಾರೆ. ಕಳೆದ ಏಳು ವರ್ಷಗಳಿಂದ ಅವರು ಅಜೀಂ ಪ್ರೇಮ್ ಜಿ ಪ್ರತಿಷ್ಠಾನದ ಜೊತೆಗೆ ಕೆಲಸ ಮಾಡುತ್ತಿದ್ದಾರೆ. ಇದಕ್ಕೂ ಮುನ್ನ ಅವರು ಸಹರಣಪುರದ ಭೈಲಾದ ಸ್ನಾತಕೋತ್ತರ  ಕಾಲೇಜಿನಲ್ಲಿ ರಸಾಯನಶಾಸ್ತ್ರ ಬೋಧನೆ ಮಾಡುತ್ತಿದ್ದರು. ಅವರನ್ನು ಸಂಪರ್ಕಿಸಬಹುದಾದ ಇಮೇಲ್ ಐಡಿ: vipin.kumar@azimpremjifoundation.org.